# ವನಿತಾ ಸದನ ಶಿಕ್ಷಣ ಸಂಸ್ಥೆ, ಮೈಸೂರು

## THE QUEST ACADEMY ಗೆ ಭೇಟಿ ನೀಡಿದ ವರದಿ

ಎಲ್ಲರಿಗೂ ಹಾಗೂ ಶ್ರೀನಿವಾಸ್ ರಾಮಾನುಜಮ್ ಅವರ ಜನ್ಮದಿನಾಚರಣೆಯ ಶುಭಾಷಯಗಳು.

ವಿಶ್ವದಲ್ಲೇ ಶ್ರೇಷ್ಠ ಭಾರತೀಯ ಗಣಿತಜ್ಞ ರೆಂದು ಪ್ರಖ್ಯಾತರಾಗಿರುವ ಜಗದ್ವಿಖ್ಯಾತ ಗಣಿತಜ್ಞ ಶ್ರೀನಿವಾಸ್ ರಾಮಾನುಜಮ್ ರವರ ಜನ್ಮದಿನದಂದು ನಡಸುವ ರಾಷ್ಟ್ರೀಯ ಗಣಿತ ದಿನಾಚರಣೆ ಅಂಗವಾಗಿ, ದಿನಾಂಕ : 22–12–2024 ರಂದು ಮೈಸೂರಿನ ಸುಭಾಷ್‌ನಗರದಲ್ಲಿರುವ **"THE QUEST ACADEMY"** ಸಂಸ್ಥೆಯವರು ಮೈಸೂರಿನ ಗಣಿತ ಪ್ರಿಯರಿಗೆ **"THE MATHEMATICAL BUFFET"**ಎಂಬ ಶೀರ್ಷಿಕೆಯಡಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ನಮ್ಮ ಶಾಲೆಯನ್ನು ಆಹ್ವಾನಿಸಿದ್ದು , ಸುಮಾರು 11 ಗಂಟೆಯ ಸಮಯಕ್ಕೆ 20 ವಿದ್ಯಾರ್ಥಿಗಳು ಹಾಗೂ 4 ಶಿಕ್ಷಕರು ಭಾಗವಹಿಸಿದ್ದು ಶ್ರೀಮತಿ ವೀಣಾಮಣಿ, ಪ್ರಾಂಶುಪಾಲರು, ದಿ ಕ್ವೆಸ್ಟ್ ಅಕಾಡೆಮಿ, ಮೈಸೂರು ಇವರು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಈ ಕಾರ್ಯಕ್ರಮದ ಮೊದಲನೇ ಅವಧಿಯಲ್ಲಿ ಶ್ರೀ ವಿ ವಿ ಎಸ್ ಶಾಸ್ತ್ರಿ ಸರ್ ರವರು ಆಟಗಳ ಮೂಲಕ ಗಣಿತವನ್ನು ಸುಲಭವಾಗಿ ಕಲಿಯುವ ಬಗೆ, ಓರಿಗಾಮಿ ಮೂಲಕ ಗಣಿತ ಮಾದರಿಗಳನ್ನು ತಯಾರಿಸುವುದನ್ನು ತಿಳಿಸುತ್ತಾ ಕೆಲವು ಮಾದರಿಗಳನ್ನು ವಿದ್ಯಾರ್ಥಿಗಳಿಂದ ಮಾಡಿಸಿದರು. ನಂತರ ಮತ್ತೊಬ್ಬ ಜಗದ್ವಿಖ್ಯಾತ ಗಣಿತಜ್ಞ ಥೇಲ್ಸ್ ನ ಪರಿಚಯ ಹಾಗೂ ಅವರು ಗಣಿತ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು ಮತ್ತು ಸಾಧನೆಗಳನ್ನು ತಿಳಿಸಿದರು.

ಕಾರ್ಯಕ್ರಮದ ಎರಡನೇ ಅವಧಿಯಲ್ಲಿ ಶ್ರೀ ಟಿ.ಕೆ. ಪ್ರಸನ್ನಮೂರ್ತಿ ಸರ್, ರವರು ಶ್ರೀನಿವಾಸ್ ರಾಮಾನುಜಮ್ ಹಾಗೂ ಮೇರಿ ಕ್ಯೂರಿ ರವರ ಪರಿಚಯ, ಕೊಡುಗೆಗಳನ್ನು ತಿಳಿಸಿದರು. ಗಣಿತ ಕ್ಷೇತ್ರವನ್ನು ಸುಂದವಾಗಿಸಲು ಕೊಡುಗೆ ನೀಡಿದ ಅನೇಕ ಗಣಿತಜ್ಞರನ್ನು ಪರಿಚಯಿಸಿ ಕೊಟ್ಟರು. ನಂತರ ವಿದ್ಯಾರ್ಥಿಗಳಿಗೆ ರಾಮಾನುಜಮ್ ರವರು ಹಾರ್ಡಿ ಸಂಖ್ಯೆ ಬಗ್ಗೆ ತಿಳಿಸಿದರು ಹಾಗೂ ಗಣಿತದ ವಿವಿಧ ಮಾದರಿಗಳನ್ನು ವಿವರಿಸಿಸುತ್ತಾ ಚಟುವಟಿಕೆಗಳನ್ನು ಮಾಡಿಸಿದರು.

ಒಟ್ಟಾರೆಯಾಗಿ ಗಣಿತ ಕಲಿಕೆಯು ತುಂಬಾ ಸುಲಭ ಮತ್ತು ಆಸಕ್ತಿದಾಯಕ, ಗಣಿತವು ದೈನಂದಿನ ಜೀವನಲ್ಲಿ ಅತೀ ಮುಖ್ಯ, ಗಣಿತವು ಹಲವಾರು ಸುಂದರ ಅದ್ಭುತಗಳನ್ನು ಒಳಗೊಂಡಿದೆ ಎಂದು ಈ ಕಾರ್ಯಕ್ರಮವು ನಮಗೆ ತಿಳಿಸಿಕೊಟ್ಟಿತು ಎನ್ನುವುದು ನಮ್ಮೆಲ್ಲರ ಅಭಿಪ್ರಾಯವಾಗಿದ್ದು, ಈ ಅವಕಾಶ ನೀಡಿದ ಸಂಸ್ಥೆಯ ಪ್ರತಿಯೊಬ್ಬರಿಗೂ ಧನ್ಯವಾದಗಳು .